ಬಗರ್ ಹುಕುಂ ಸಮಿತಿ

702 (842) ಶ್ರೀ ಸುರೇಶ್ ಬಾಬು ಸಿ.ಬಿ (ಚಿಕ್ಕನಾಯನಹಳ್ಳಿ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಚಿಕ್ಕನಾಯಕನಹಳ್ಳಿ ಬಗರ್ ಹುಕುಂ ಸಮಿತಿಗೆ ಅಧಿಕಾರೇತರ ಸದಸ್ಯರನ್ನು ನೇಮಕ ಮಾಡುವ ಉದ್ದೇಶ ಸರ್ಕಾರದ ಮುಂದಿದೆಯೇ;

ಆ) ಮುಂದಿದ್ದಲ್ಲಿ, ಈ ಬಗ್ಗೆ ಕೈಗೊಂಡಿರುವ ಕ್ರಮಗಳೇನು; ಇದುವರೆಗೆ ಈ ಸಮಿತಿ ರಚನೆಗೆ ಸಂಬಂಧಿಸಿದಂತೆ ಏನು ಕ್ರಮ ಕೈಗೊಳ್ಳಲಾಗಿದೆ?

ಶ್ರೀ ಜಿ. ಕರುಣಾಕರ ರೆಡ್ಡಿ (ಕಂದಾಯ ಸಚಿವರು) :

ಅ) ಮತ್ತು ಆ) ಚಿಕ್ಕನಾಯಕನಹಳ್ಳಿ ತಾಲ್ಲೂಕು ಬಗರ್‌ಹುಕುಂ ಸಮಿತಿಗೆ ಅಧಿಕಾರೇತರ ಸದಸ್ಯರನ್ನು ನೇಮಕ ಮಾಡುವ ಸಂಬಂಧ ಪ್ರಸ್ತಾವನೆಯು ಸರ್ಕಾರದ ಪರಿಶೀಲನೆಯಲ್ಲಿದೆ.

ಕೈಗಾರಿಕಾ ರಸ್ತೆ ಅಭಿವೃದ್ಧಿ

709 (550) ಶ್ರೀ ವೆಂಕಟ ಶಿವಾ ರೆಡ್ಡಿ ಜಿ.ಕೆ. (ಶ್ರೀನಿವಾಸಮರ) : ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಕರ್ನಾಟಕ ಕೈಗಾರಿಕಾ ಅಭಿವೃದ್ಧಿ ಮಂಡಳಿಯಿಂದ ಕೈಗಾರಿಕಾ ಪ್ರದೇಶಗಳ ರಸ್ತೆಗಳನ್ನು ಮೇಲ್ದರ್ಜೆಗೇರಿಸಲು ಸರ್ಕಾರ ಕ್ರಮ ಕೈಗೊಂಡಿದೆಯೇ; ಹಾಗಿದ್ದಲ್ಲಿ ಕೈಗೊಂಡಿರುವ ಕೈಗಾರಿಕಾ ಪ್ರದೇಶಗಳಾವುವು;

ಆ) ಪ್ರತಿ ಪ್ರದೇಶಕ್ಕೂ 2009–10ರಲ್ಲಿ ನಿಗದಿಪಡಿಸಲಾದ, ಬಿಡುಗಡೆಯಾದ ಹಾಗೂ ಖರ್ಚು ಮಾಡಿದ ಹಣವೆಷ್ಟು; (ಪೂರ್ಣ ಮಾಹಿತಿ ನೀಡುವುದು);

ಇ) ಕೈಗಾರಿಕಾ ರಸ್ತೆ ಅಭಿವೃದ್ಧಿಗಾಗಿ ಸಮಿತಿಯನ್ನು ರಚಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ, ಬಂದಿದ್ದಲ್ಲಿ ಸಮಿತಿಯ ಕಾರ್ಯ ವೈಖರಿ ರೀತ್ಯ ಕಾರ್ಯ ನಿರ್ವಹಿಸುತ್ತಿದೆಯೇ, ನಿರ್ವಹಿಸದಿದ್ದಲ್ಲಿ ಕಾರಣಗಳೇನು;

ಶ್ರೀ ಮುರುಗೇಶ್ ಆರ್. ನಿರಾಣಿ (ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು) :

ಅ) ಸರ್ಕಾರದ 2006–07 ನೂತನ ಕೈಗಾರಿಕಾ ನೀತಿಯಂತೆ ಹಾಲಿ ಕೈಗಾರಿಕಾ ಪ್ರದೇಶಗಳ ಮೂಲಭೂತ ಸೌಕರ್ಯಗಳನ್ನು ಮೇಲ್ದರ್ಜೆಗೇರಿಸುವುದಕ್ಕೆ ಸಂಬಂಧಿಸಿದಂತೆ ಮಂಡಳಿಯು 2006–07ರಿಂದ ಹಾಲಿ ಕೈಗಾರಿಕಾ ಪ್ರದೇಶದ ಮೂಲಭೂತ ಸೌಕರ್ಯಗಳಾದ ರಸ್ತೆ, ಚರಂಡಿ, ನೀರು ಸರಬರಾಜು, ಬೀದಿ ದೀಪಗಳನ್ನು ಹಂತ ಹಂತವಾಗಿ ಮೇಲ್ದರ್ಜೆಗೇರಿಸಿದೆ ಮತ್ತು ಮೇಲ್ದರ್ಜೆಗೇರಿಸಿದ ಕೈಗಾರಿಕಾ ಪ್ರದೇಶದ ಹೆಸರುಗಳನ್ನು ಅನುಬಂಧ–1 ರಿಂದ 3 ರಲ್ಲಿ ನಮೂದಿಸಿದೆ.

ಆ) 2009–10ರಲ್ಲಿ ನಿಗದಿಪಡಿಸಲಾದ, ಬಿಡುಗಡೆಯಾದ ಹಾಗೂ ಖರ್ಚು ಮಾಡಿದ ಹಣದ ಮಾಹಿತಿಯನ್ನು ಅನುಬಂಧ 4 ರಲ್ಲಿ ನಮೂದಿಸಲಾಗಿದೆ.

ಇ) ಆಯುಕ್ತರು, ಕೈಗಾರಿಕಾಭಿವೃದ್ಧಿ ಹಾಗೂ ನಿರ್ದೇಶಕರು, ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ ಇವರ ಅಧ್ಯಕ್ಷತೆಯಲ್ಲಿ ಕಾಮಗಾರಿ ಸಮಿತಿಯನ್ನು ರಚಿಸಿದೆ. ಈ ಸಮಿತಿಯು ಮೂಲಭೂತ ಸೌಕರ್ಯಗಳನ್ನು ಮೇಲ್ದರ್ಜೆಗೇರಿಸುವ ಕಾಮಗಾರಿಗಳ ಪರಿಶೀಲನೆ, ಅನುಮೋದನೆ ಮುಂತಾದ ಕಾರ್ಯಗಳನ್ನು ನಿರ್ವಹಿಸುತ್ತಿದೆ.

LD 30 E-137

ಅನುಬಂಧ –1

2006–07 ರಲ್ಲಿ ರಸ್ತೆ, ಚರಂಡಿ, ನೀರು ಸರಬರಾಜು ಮುಂತಾದ ಮೂಲಸೌಕರ್ಯಗಳ ಮೇಲ್ದರ್ಜೆಗೇರಿಸಿರುವ ಕೈಗಾರಿಕಾ ಪ್ರದೇಶಗಳ ಹೆಸರು

ಕ್ರ ಸಂ.	ಜಿಲ್ಲೆ ಹೆಸರು	ಕೈಗಾರಿಕಾ ಪ್ರದೇಶದ ಹೆಸರು
1	ಬೆಂಗಳೂರು	ಅತ್ತಿಬೆಲೆ
2		ಬೊಮ್ಮಸಂದ್ರ 4ನೇ ಹಂತ
3		ದೊಡ್ಡಬಳ್ಳಾಪುರ
4		ಇ ಪಿ ಐ ಪಿ
5		ಇ ಪಿ ಐ ಪಿ 2ನೆ ಫೇಸ್
6		ಹೊಸಕೋಟೆ
7		ಜಿಗಣಿ 1 ಮತ್ತು 2ನೇ ಹಂತ
8		ಕಾಡುಗೋಡಿ
9		ಕುಂಬಳಗೂಡು 1 ಮತ್ತು 2ನೇ ಫೇಸ್
10		ಪಿಣ್ಯ
11		ವೀರಸಂದ್ರ
12	ಬೆಳಗಾಂ	ಗೋಕಾಕ್
13		ಹೊನಗ
14		ಸಕಾತಿ
15		ಕಂಗ್ರಾಳಿ
16	ಬೀದರ್	ಬಸವಕಲ್ಯಾಣ
17	ಬಿಜಾಪುರ	ಮಹಲ್ ಬಗಾಯತ್
18	ಚಿಕ್ಕಮಗಳೂರು	ಅಂಬ್ಳೆ

19	ದಕ್ಷಿಣ ಕನ್ನಡ	ಬೈಕಂಪಾಡಿ
20		ಕಾರ್ನಾಡ್
21	ದಾವಣಗೆರೆ	ಹರಳಾಪುರ
22	ಧಾರವಾಡ	ಬೇಲೂರು
23		ತಾರಿಹಾಳ
24		ರಾಯಪುರ
25	ಗುಲ್ಬರ್ಗ	ಕಪನೂರು
26	ಹಾಸನ	ಹಾಸನ – ಬಿ ಕಟ್ಟಿಹಳ್ಳಿ
27		ಹಾಸನ – ಗ್ರೋತ್ ಸೆಂಟರ್
28		ಹೋಳೆನರಸೀಪುರ
29	ಕೋಲಾರ	ಬಂಗಾರಪೇಟೆ
30	ಕೊಪ್ಪಳ	ಕುಷ್ಟಗಿ
31	ಮಂಡ್ಯ	ಸೋಮನಹಳ್ಳಿ
32		ತೂಬಿನಕೆರೆ
33	ಮೈಸೂರು	ಎಲಕ್ಟ್ರಾನಿಕ್ ಸಿಟಿ– ಮೈಸೂರು
34		ಹೆಬ್ಬಾಳ
35		ಹೂಟಗಳ್ಳಿ
36		ಮೇಟಗಳ್ಳಿ ಮತ್ತು ಬೆಳಗೊಳ
37		ಹೂಟಗಳ್ಳಿ ಮತ್ತು ಬೆಲವಾಡಿ
38		ನಂಜನಗೂಡು
39		ತಾಂಡ್ಯ

40	ರಾಯಚೂರು	ದೇವಸುಗೂರ್
41		ರಾಯಚೂರು
42		ರಾಯಚೂರ ಗ್ರೋತ್ ಸೆಂಟರ್
43	ಶಿವಮೊಗ್ಗ	ಮಚೇನಳ್ಳಿ
44		ಮಂಡಳಿ ಕಲ್ಲೂರು
45		ಆಟೋಕಾಂಪ್ಲೆಕ್ಸ್
46	ತುಮಕೂರು	ಅಂತರಸನ ಹಳ್ಳಿ 1ನೇ ಮತ್ತು 2ನೇ ಹಂತ
47		ಹಿರೇಹಳ್ಳಿ
48		ಕುಣಿಗಲ್
49		ಸತ್ಯಮಂಗಳ
50	ಉಡುಪಿ	ಶಿವಳ್ಳಿ

ಅನುಬಂಧ – 2

2007–08 ರಲ್ಲಿ ರಸ್ತೆ, ಚರಂಡಿ, ನೀರು ಸರಬರಾಜು ಮುಂತಾದ ಮೂಲಸೌಕರ್ಯಗಳ ಮೇಲ್ದರ್ಜೆಗೇರಿಸಿರುವ ಕೈಗಾರಿಕಾ ಪ್ರದೇಶಗಳ ಹೆಸರು

ಕ್ರ. ಸಂ.	ಜಿಲ್ಲೆ ಹೆಸರು	ಕೈಗಾರಿಕಾ ಪ್ರದೇಶದ ಹೆಸರು
1	ಬೆಂಗಳೂರು	ಪಿಣ್ಯ (ಯುಜಿಡಿ)
2		ಬಿಡಿದಿ
3		ದಾಬಸ್ ಪೇಟೆ 1ನೇ ಫೇಸ
4		ಬಿಎಂಎಸ್ ಜಿಗಣಿ ಲಿಂಕ್ ರಸ್ತೆ
5		ಬೊಮ್ಮಸಂದ್ರ 4ನೇ ಹಂತ
6		ದೊಡ್ಡಾನೆಕುಂಡಿ
7		ದ್ಯಾವಸಂದ್ರ

8		ಜಿಗಣಿ 1ನೇ ಫೆಸ್
9		ವೀರಸಂದ್ರ
10	ಬೆಳಗಾಂ	ಕನಬರ್ಗಿ ಅಟೊ ಕಾಂಪ್ಲೆಕ್ಸ್
11		ಕಂಗ್ರಾಳಿ
12		ನೀರು ಸರಬರಾಜು – ಕೈಗಾರಿಕಾ ಪ್ರದೇಶಗಳಿಗೆ
13		ಉದಯಂಬಾಗ್ (ನೀರು ಸರಬರಾಜು ಠೇವಣಿ)
14	ಬಳ್ಳಾರಿ	ಮುಂಡರಗಿ 1, 2 ಮತ್ತು 3ನೇ ಫೇಸ್
15		ಅನಂತಪುರ ರಸ್ತೆ
16		ಸಂಕಲಾಪುರ
17	ಬೀದರ್	ಕೊಲ್ಹಾರ
18	ಚಿತ್ರದುರ್ಗ	ಕೆಳಕೋಟೆ
19	ಚಿಕ್ಕಮಗಳೂರ	ಅಂಬಳೆ
20	ದಕ್ಷಿಣ ಕನ್ನಡ	ಬೈಕಂಪಾಡಿ
21	ದಾವಣಗೆರೆ	ದಾವಣಗೆರೆ
22	ಧಾರವಾಡ	ಲಕ್ಕಮನಹಳ್ಳಿ
23		ಠಾಯಪುರ
24		ಸತ್ತೂರು
25		ತಾರಿಹಾಳ್
26		ಗ್ರೋತ್ ಸೆಂಟರ್

27	ಗುಲ್ಬರ್ಗ	ಕಪನೂರು 1 ಮತ್ತು 2 ನೇ ಹಂತ
28	ಹಾಸನ	ಹಾಸನ ಗ್ರೋತ್ ಸೆಂಟರ್
29	ಕೋಲಾರ	ಬಂಗಾರಪೇಟೆ
30		ಮಾಲೂರು 1 ಮತ್ತು 2ನೇ ಫೇಸ್
31		ತಮಕ
32	ಚಿಕ್ಕಬಳ್ಳಾಪುರ	ಚಿಕ್ಕಬಳ್ಳಾಪುರ
33	ಕೊಪ್ಪಳ	ಕುಷ್ಟಗಿ
34	ಕಾರವಾರ	ಸಿರವಾಡ
35	ಮಂಡ್ಯ	ಸೋಮನಹಳ್ಳಿ
36		ತೂಬಿನಕೆರೆ
37	ಮೈಸೂರು	ಹೆಬ್ಬಾಳ
38		ಹೆಬ್ಬಾಳ (ವಿವರಸ್ ಕಾಲೋನಿ)
39		ನಂಜನಗೂಡು
40		ತಾಂಡ್ಯ
41	ರಾಯಚೂರು	ದೇವಸುಗೂರ್
42		ರಾಯಚೂರು
43	ಶಿವಮೊಗ್ಗ	ಮಾಚೇನಳ್ಳಿ
44		ಮಂಡಳಿ ಕಲ್ಲೂರು
45		ಆಟೊಕಾಂಪ್ಲೆಕ್ಸ್
46	ತುಮಕೂರು	ಸಂತರಸನ ಹಳ್ಳಿ 1 ನೇ ಹಂತ

47		ಹೀರೆಹಳ್ಳಿ
48		ಕುಣಿಗಲ್
49		ಸತ್ಯಮಂಗಳ
50	ಉಡುಪಿ	ಶಿವಳ್ಳಿ
51	ಯಾದಗಿರ್	ಯಾದಗಿರ್

ಅನುಬಂಧ – 3

2008–09 ರಲ್ಲಿ ರಸ್ತೆ, ಚರಂಡಿ, ನೀರು ಸರಬರಾಜು, ಬೀದಿ ದೀಪಗಳು ಮುಂತಾದ ಮೂಲಸೌಕರ್ಯಗಳ ಮೇಲ್ದರ್ಜೆಗೇರಿಸಿರುವ ಕೈಗಾರಿಕಾ ಪ್ರದೇಶಗಳ ಹೆಸರು

ಕ್ರ ಸಂ.	ಜಿಲ್ಲೆ ಹೆಸರು	ಕೈಗಾರಿಕಾ ಪ್ರದೇಶದ ಹೆಸರು
1	ಬೆಂಗಳೂರು	ಅಪೇರಲ್ ಪಾರ್ಕ್, ದೊಡ್ಡಬಳ್ಳಾಪುರ
2		ದೊಡ್ಡಬಳ್ಳಾಪುರ
3		ಹೊಸಕೋಟೆ
4		ದಾಬಸ್ ಪೇಟೆ 1ನೇ ಫೇಸ್
5		ಕುಂಬಳಗೋಡು–1 ಮತ್ತು 2 ನೇ ಹಂತ.
6		ಅತ್ತಿಬೆಲೆ
7		ಎಲೆಕ್ಟ್ರಾನಿಕ್ ಸೀಟಿ 2ನೇ ಹಂತ.
8		ದೊಡ್ಡಾನೆಕುಂಡಿ
9		ಕಾಡುಗೋಡಿ
10		ವೀರಸಂದ್ರ
11		ದ್ಯಾವಸಂದ್ರ ಮತ್ತು ಸಾದರಮಂಗಲ
12		ಬೋಮ್ಮಸಂದ್ರ 4ನೇ ಹಂತ .
13		ಬೋಮ್ಮಂದ್ರ 1 ಮತ್ತು 2 ನೇ ಹಂತ
14		ಜಿಗಣಿ 1 ಮತ್ತು 2ನೇ ಹಂತ
15		ಇ ಪಿ ಐ ಪಿ

16	ಬೆಳಗಾಂ	ಕನಬರ್ಗಿ
17		ಹೊನಗ
18		ಕಂಗ್ರಾಳಿ, ಕಕಾತಿ, ಹೊನಗ ಕೈಗಾರಿಕಾ ಪ್ರದೇಶಗಳಿಗೆ ನೀರು ಸರಬರಾಜು
19	ಬಾಗಲಕೋಟೆ	ಆಗ್ರೋಟೆಕ್ ಪಾರ್ಕ್
20	ಬೀದರ್	ಬಸವಕಲ್ಯಾಣ
21		ಹುಮನಬಾದ್
22		ಕೋಲ್ಹಾರ್
23		ನೌಬಾದ್
24	ಬಿಜಾಪುರ	ಮಹಲ್ ಬಗಾಯತ್
25	ಗದಗ	ನರಸಾಪುರ
26	ಧಾರವಾಡ	ಬೇಲೂರು
27		ರಾಯಪುರ
28		ತಾರಿಹಾಳ
29	ಬಳ್ಳಾರಿ	ಮುಂಡರಗಿ 1, 2 ಮತ್ತು 3ನೇ ಫೇಸ್
30		ಅನಂತಪುರ ರಸ್ತೆ
31		ಸಂಕಲಾಪುರ
32	ಕೊಪ್ಪಳ	ಕುಷ್ಟಗಿ (ನೀರು ಸರಬರಾಜು)
33	ಶಿವಮೊಗ್ಗ	ಮಾಚೇನಹಳ್ಳಿ
34		ಮಂಡಳಿ ಕಲ್ಲೂರು (ನೀರು ಸರಬರಾಜು)
35		ಆಟೊಕಾಂಪ್ಲೆಕ್ಸ್
36	ಚಿತ್ರದುರ್ಗ	ಕೆಳಕೋಟೆ

37	ಹಾಸನ	ಹಾಸನ – ಗ್ರೋತ್ ಸೆಂಟರ್
38	ಉಡುಪಿ	ಶಿವಳ್ಳಿ
39	ದಕ್ಷಿಣ ಕನ್ನಡ	ಬೈಕಂಪಾಡಿ
40	ಮಂಡ್ಯ	ಸೋಮನಹಳ್ಳಿ
41		ತೂಬಿನಕೆರೆ
42	ಕೊಡಗು	ಕುಶಾಲನಗರ,
43	ಮೈಸೂರು	ಹೆಬ್ಬಾಳ, ಬೆಳಗೋಳ, ಹೂಟಗಳ್ಳಿ ಮತ್ತು ಬೆಲವಾಡಿ
44		ನಂಜನಗೂಡು
45		ತಾಂಡ್ಯ
46	ತುಮಕೂರು	ಅಂತರಸನ ಹಳ್ಳಿ 2ನೇ ಹಂತ
47		ಹೀರೆಹಳ್ಳಿ
48		ಕುಣಿಗಲ್
49		ಸತ್ಯಮಂಗಳ
50	ರಾಮನಗರ	ಬಿಡದಿ
51	ಕೋಲಾರ	ಬಂಗಾರಪೇಟೆ
52		ತಮಕ
53		ಮಾಲೂರು
54	ಚಿಕ್ಕಬಳ್ಳಾಪುರ	ಚಿಕ್ಕಬಳ್ಳಾಪುರ

ಅನುಬಂಧ – 4

2009–10 ರಲ್ಲಿ ನಿಗದಿಪಡಿಸಲಾದ, ಬಿಡುಗಡೆಯಾದ ಹಾಗೂ ಖರ್ಚು ಮಾಡಿದ ಹಣದ ಮಾಹಿತಿ.

(ರೂ. ಲಕ್ಷಗಳಲ್ಲಿ)

ಕ್ರ ಸಂ.	ಕೈಗಾರಿಕಾ ಪ್ರದೇಶದ ಹೆಸರು	ನಿಗದಿ ಪಡಿಸ ಲಾದ ಮೊತ್ತ	ಸರ್ಕಾರ ದಿಂದ ಬಿಡುಗಡೆ ಯಾದ ಮೊತ್ತ	ಮಂಡಳಿಯು ಫೆಬ್ರವರಿ 2010ರ ವರೆಗೆ ಖರ್ಚು ಮಾಡಿದ ಮೊತ್ತ
1.	ಬೆಳಗಾಂ ಜಿಲ್ಲೆ			
	ಕನಬರ್ಗಿ	471.00	–	425.21
	ಕಕಾತಿ	51.00	–	46.43
	ಹೊನಗ	99.50	–	57.75
	ಕಂಗ್ರಾಳಿ	13.00	–	10.06
	ಅನಗೋಲ	10.50	–	10.00
2.	ಬಾಗಲಕೋಟೆ			
	ನವನಗರ – ಆಗ್ರೊಟೆಕ್ ಪಾರ್ಕ	80.00	–	80.00
3.	ಬಿಜಾಪುರ			
	ಮಹಾಲ್ ಬಗಾಯತ್	72.00	–	71.50
	ಅಲಿಯಬಾದ್	28.00	–	16.73
4.	ಗದಗ್			
	ನರಸಪುರ	33.00	–	7.28
5.	ಧಾರವಾಡ			
	ಬೇಲೂರ 1 ಮತ್ತು 2ನೇ ಹಂತ	368.50	–	212.61

	ತಾರಿಹಾಳ	82.50	–	84.03
	ರಾಯಪುರ	49.00	–	48.50
		1358.00	**–**	**1070.08**

ಕರ್ನಾಟಕ ಕೈಗಾರಿಕಾ ಅಭಿವೃದ್ಧಿ ಮಂಡಳಿಯ ವತಿಯಿಂದ ಭೂಸ್ವಾಧೀನ

708 (549) ಶ್ರೀ ವೆಂಟಶಿವರೆಡ್ಡಿ ಜೆ.ಕೆ. (ಶ್ರೀನಿವಾಸಪುರ) : ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ಜಿಲ್ಲೆ, ಬೆಂಗಳೂರು ಪೂರ್ವ ತಾಲ್ಲೂಕಿನ ವರ್ತೂರು ಹೋಬಳಿ, ಅಮಾನಿ ಬೆಳ್ಳಂದೂರು ಖಾನೆ ಗ್ರಾಮಕ್ಕೆ ಸೇರಿದ ಜಮೀನುಗಳನ್ನು ಕರ್ನಾಟಕ ಕೈಗಾರಿಕಾ ಅಭಿವೃದ್ಧಿ ಮಂಡಳಿಯವರು ಕೈಗಾರಿಕಾ ಅಭಿವೃದ್ಧಿಗಾಗಿ ಪ್ರಾಥಮಿಕ ಅಧಿಸೂಚನೆ ಹೊರಡಿಸಿ ವಶಪಡಿಸಿಕೊಂಡ ಜಮೀನಿನ ವಿಸ್ತೀರ್ಣವೆಷ್ಟು (ಸರ್ವೆ ನಂಬರಿನ ಸಹಿತ ಮಾಹಿತಿ ನೀಡುವುದು);

ಆ) ಅಂತಿಮ ಅಧಿಸೂಚನೆ ಹೊರಡಿಸುವಾಗ ಕೈಬಿಡಲಾದ ಜಮೀನಿನ ವಿಸ್ತೀರ್ಣವೆಷ್ಟು (ಸರ್ವೆ ನಂಬರ್ ಮತ್ತು ವಿಸ್ತೀರ್ಣವಾರು ಸಹಿತ ಮಾಹಿತಿ ನೀಡುವುದು);

ಇ) ವಶಪಡಿಸಿಕೊಳ್ಳಲಾದ ಜಮೀನುಗಳನ್ನು ಕೈಬಿಡಲು ಕಾರಣಗಳೇನು (ಮಾಹಿತಿ ನೀಡುವುದು);

ಈ) ವಶಪಡಿಸಿಕೊಳ್ಳಲಾದ ಜಮೀನುದಾರರಗೆ ನೀಡಲಾಗಿರುವ ಪರಿಹಾರದ ಮೊತ್ತವೆಷ್ಟು?

ಶ್ರೀ ಮುರುಗೇಶ್ ಆರ್. ನಿರಾಣಿ (ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು) :

ಅ) ಬೆಂಗಳೂರು ಜಿಲ್ಲೆ, ಬೆಂಗಳೂರು ಪೂರ್ವ ತಾಲ್ಲೂಕಿನ ವರ್ತೂರು ಹೋಬಳಿ, ಅಮಾನಿ ಬೆಳ್ಳಂದೂರು ಖಾನೆ, ಕರಿಯಮ್ಮನ ಅಗ್ರಹಾರ, ದೇವರಬೀಸನಹಳ್ಳಿ ಮತ್ತು ಬೆಳ್ಳಂದೂರು ಗ್ರಾಮಗಳಲ್ಲಿ ಮಂಡಳಿಯ ಕೈಗಾರಿಕಾ ಪ್ರದೇಶಕ್ಕಾಗಿ ಕಲಂ 3(1), 1(3) ಮತ್ತು 28(1) ರಂತೆ $451–30^{1/2}$ ಎಕರೆ ಜಮೀನನ್ನು ಕೈಗಾರಿಕಾ ಅಭಿವೃದ್ಧಿಗಾಗಿ